# Monday 05th August 2024

# RVCE: Graduation Ceremony 2024

ಪ್ರಜಾ ವಾಹಿನಿ
ಜನ ದನಿ
ಕನ್ನಡ ದಿನಪತ್ರಿಕೆ
ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಹಾಸನ, ಕೋಲಾರ, ರಾಮನಗರ, ತುಮಕೂರು, ಉತ್ತರ ಕರ್ನಾಟಕ, ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು
PRAJA VAHINI Kannada Daily, Bangalore

## ಪದವಿ ಪ್ರಧಾನ ಸಮಾರಂಭ –2024 : ಎಂ.ಆರ್. ಜೈಶಂಕರ್

● ಪ್ರಜಾವಾಹಿನಿ–ಯಶವಂತಪುರ




ದೇಶವನ್ನು ಅಭಿವೃದ್ಧಿಯ ಪಥದತ್ತ ಕೊಂಡೊಯ್ಯುವ ತಾಂತ್ರಿಕ ಹಾಗೂ ವೈಜ್ಞಾನಿಕ ಹೊಸ ಆವಿಷ್ಕಾರಗಳ ಹಿಂದೆ ಇಂಜಿನಿಯರ್‌ಗಳ ಪಾತ್ರ ಮಹತ್ವದಾಗಿದೆ ಎಂದು ಬ್ರಿಗೇಡ್ ಗ್ರೂಪ್‌ನ ಕಾರ್ಯಾಧ್ಯಕ್ಷ ಎಂ.ಆರ್. ಜೈಶಂಕರ್ ತಿಳಿಸಿದರು.

ಮೈಸೂರು ಮುಖ್ಯ ರಸ್ತೆಯ ಪೂರ್ಣಿಮಾ ಪ್ಯಾಲೇಸ್‌ನಲ್ಲಿ ರಾ.ವಿ.ತಾಂತ್ರಿಕ ಮಹಾವಿದ್ಯಾಲಯದ ವತಿಯಿಂದ ಹಮ್ಮಿಕೊಂಡಿದ್ದ ಅಂತಿಮ ವರ್ಷದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಪದವೀಧರರಾದ ಅರ್ಹ ವಿದ್ಯಾರ್ಥಿಗಳಿಗೆ ಪದವಿ ಪ್ರಧಾನ ಸಮಾರಂಭ –2024 ರ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಪದವಿ ಘಟಿಕೋತ್ಸವದ ಭಾಷಣದಲ್ಲಿ ಮಾತನಾಡಿದ ಅವರು ನಿಮ್ಮ ಪದವಿ ಗಳಿಕೆಯ ಹಿಂದೆ ನಾಲ್ಕು ವರ್ಷಗಳ ಶ್ರಮ, ತಂದೆತಾಯಿ ಬೆಂಬಲ, ಗುರುಗಳು ನೀಡಿದ ಮೌಲ್ಯಯುತ ಶಿಕ್ಷಣ ಕಾರಣವಾಗಿದೆ ಎಂದರು.

ಇಂದಿನ ಯುವ ಪೀಳಿಗೆ ಎದುರಿಸಬೇಕಾಗಿರುವುದು ಪ್ರಾದೇಶಿಕ ಸವಾಲುಗಳನ್ನಲ್ಲ ಬದಲಾಗಿ ಜಾಗತಿಕ ಸವಾಲುಗಳನ್ನು ನಮ್ಮ ದೇಶದಲ್ಲಿ ಸಾಧನೆ ಮಾಡುವವರಿಗೆ ಅವಕಾಶಗಳು ಬಹಳಷ್ಟು ಇದೆ.ಅದನ್ನು ಬಳಸಿಕೊಳ್ಳುವ ಮನೋಭಾವವನ್ನು ನಾವು ರೂಢಿಸಿಕೊಳ್ಳಬೇಕು.ನಮಗೆ ಸಹಜ ಸಾಮರ್ಥ್ಯವಿರುವ ವಿಷಯದ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಿ ಶ್ರಮವಹಿಸಿ ದುಡಿದರೆ ಸಮಾಜದಲ್ಲಿ ಉನ್ನತ ಸ್ಥಾನವನ್ನು ಪಡೆಯಬಹುದು ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿದ ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್‌ನ ಅಧ್ಯಕ್ಷ ಡಾ.ಎಂ.ಪಿ.ಶ್ಯಾಮ್ ಸಮಾಜದಿಂದ ಉಪಕೃತರಾದ ನಾವು ಸಮಾಜಕ್ಕೆ ನಮ್ಮಿಂದಾದ ಸೇವೆ ಸಲ್ಲಿಸದೇ ಹೋದರೆ ನಮ್ಮ ವ್ಯಕ್ತಿತ್ವಕ್ಕೆ ಘನೆತೆಯಿರುವುದಿಲ್ಲ. ತಾವು ಕಲಿತ ಸಂಸ್ಥೆಯ ಬಗ್ಗೆ ಉತ್ತಮ ವಿಷಯಗಳನ್ನು ಪಸರಿಸಿ ಸಂಸ್ಥೆಯ ಉನ್ನತಿಗೆ ಸಹಕಾರವನ್ನು ನೀಡಬೇಕೆಂದು ಕರೆನೀಡಿದರು.

14ನೇ ಪದವಿ ಪ್ರಧಾನ ಸಮಾರಂಭದಲ್ಲಿ 12 ಚಿನ್ನದ ಪದಕಗಳು, 12 ಬೆಳ್ಳಿ ಪದಕಗಳು, 18 ಬಿಇ ಪದವಿಧರರಿಗೆ ಗೌರವ ಸಮರ್ಪಣೆ ಸೇರಿದಂತೆ ಒಟ್ಟು 1,140 ಪದವಿ ಪ್ರಮಾಣಪತ್ರಗಳನ್ನು ವಿದ್ಯಾರ್ಥಿಗಳಿಗೆ ವಿತರಣೆ ಮಾಡಲಾಯಿತು.

ಪ್ರಾಂಶುಪಾಲ ಡಾ.ಕೆ.ಎನ್.ಸುಬ್ರಹ್ಮಣ್ಯ ಸ್ವಾಗತ ಭಾಷಣ ಮಾಡಿದರು. ಉಪಪ್ರಾಂಶುಪಾಲೆ ಡಾ.ಕೆ.ಎಸ್. ಗೀತಾ ವಂದನಾರ್ಪಣೆ ಸಲ್ಲಿಸಿದರು. ಉಪಾಧ್ಯಕ್ಷ ಡಾ.ಎ.ಸಿ.ಚಂದ್ರಶೇಖರರಾಜು, ಗೌರವ ಕಾರ್ಯದರ್ಶಿ ಡಾ. ಎವಿಎಸ್ ಮೂರ್ತಿ, ಜಂಟಿ ಕಾರ್ಯದರ್ಶಿ ಡಿ.ಪಿ. ನಾಗರಾಜ್, ಖಜಾಂಚಿ ಪಿ.ಎಸ್. ವೆಂಕಟೇಶ್, ಸಹಾಯಕ ಕಾರ್ಯದರ್ಶಿ ಎ. ನಿಖಿಲ್ ಸೇರಿದಂತೆ ಕಾಲೇಜಿನ ಆಡಳಿತ ಮಂಡಳಿ ಸದಸ್ಯರು, ಭೋದಕ ವರ್ಗ ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

Main Edition Edition
Aug 04, 2024 Page No. 4
Powered by: erelego.com